# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಶಿಲ್ ಜಿ. ನಮೋಶಿ ಇವರು ನಿಯಮ 72ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಬಗ್ಗೆ.**

## ಸೂಚನೆ

**ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 4(A)(1) ರಡಿಯಲ್ಲಿ ಕರ್ನಾಟಕ ಸರ್ಕಾರವು ದಿನಾಂಕ 15.02.2016 ರಿಂದ ಜಾರಿಗೆ ಬರುವಂತೆ ಹೆಚ್ಚುವರಿಯಾಗಿ 11 ಗ್ರಾಮಗಳನ್ನು ಸೇರಿಸಿ ಹಾಲಿ ಸ್ಥಳೀಯ ಯೋಜನಾ ಪ್ರದೇಶವನ್ನು ವಿಸ್ತರಿಸಿದ್ದು ಕಲಬುರಗಿ ನಗರ ಯೋಜನಾ ಪ್ರದೇಶಕ್ಕೆ ಹೊಸದಾಗಿ ಸೇರ್ಪಡೆ ಮಾಡಿದ ಗ್ರಾಮಗಳು ಇಲ್ಲಿಯವರೆಗೂ ಅಂದರೆ ಸುಮಾರು 7 ವರ್ಷಗಳು ಕಳೆದರೂ ಸಹ ಈ ಅಧಿಸೂಚನೆಯನ್ವಯ ಕಾರ್ಯ ರೂಪಕ್ಕೆ ಬಾರದೇ ಇರುವ ಬಗ್ಗೆ.**

## ಉತ್ತರ

ಕಲಬುರಗಿ ಮಹಾನಗರಕ್ಕೆ ವಿಸ್ತರಿತ ಸ್ಥಳಿಯ ಯೋಜನಾ ಪ್ರದೇಶದ ಕ್ಷೇತ್ರವನ್ನು ಒಳಗೊಂಡು ಮಹಾಯೋಜನೆ (ಪರಿಷ್ಕೃತ-3) ಅನ್ನು ತಯಾರಿಸಲು ಪ್ರಕ್ರಿಯೆಯನ್ನು ಪ್ರಾರಂಬಿಸಿ ದತ್ತಾಂಶ ಸಂಗ್ರಹಿಸಲು ದಿನಾಂಕ: 25-07-2017 ರಂತೆ ಸಭೆ ಜರುಗಿಸಿ ಎಲ್ಲಾ ಸರ್ಕಾರಿ ಇಲಾಖೆಗಳಿಂದ, ಖಾಸಗಿ ಸಂಸ್ಥೆಗಳಿಂದ ದತ್ತಾಂಶ ಸಂಗ್ರಹಿಸಲು ಕ್ರಮ ಜರುಗಿಸಲಾಗಿರುತ್ತದೆ. ಇದೇ ಹಂತದಲ್ಲಿ ದಿನಾಂಕ: 18-07-2018 ರಂತೆ "ಅಮೃತ ಯೋಜನೆಯಡಿಯಲ್ಲಿ ಪಟ್ಟಣಗಳಿಗೆ Formulation of GIS based Master Plan ಅಡಿಯಲ್ಲಿ ರಾಜ್ಯದ 27 ಪಟ್ಟಣಗಳಿಗೆ ಮಹಾಯೋಜನೆ ತಯಾರಿಸುವ ಸಂಬಂಧ ಕೇಂದ್ರ ಸರ್ಕಾರದ ಅನುದಾನದಿಂದ ಅನುಷ್ಠಾನಗೊಳಿಸಲು ನಿಗಧಿಕರಿಸಲಾಗಿದೆ, ಹಾಗೂ ಮಹಾನಗರದ ಅಗತ್ಯವಾದ ಮೂಲ ನಕ್ಷೆಯನ್ನು KSRSAC ರಿಂದ Amrut Design and Standard ಅನುಸಾರ ತಯಾರಿಸಿ ನೀಡಲು ತಿಳಿಸಲಾಗಿರುತ್ತದೆ. ಈ ಎಲ್ಲಾ ಪ್ರಕ್ರಿಯೆಗಳನ್ನು ಕೈಗೊಳ್ಳಲು ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಬೆಂಗಳೂರು ಇವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿದ್ದು, ನೋಡಲ್ ಅಧಿಕಾರಿಗಳು ಮಹಾಯೋಜನೆ ಕೆಲಸವನ್ನು ಜಿ.ಐ.ಎಸ್ ತಂತ್ರಜ್ಞಾನದಲ್ಲಿ ತಯಾರಿಸಲು ಖಾಸಗಿ ಸಂಸ್ಥೆಗಳಿಂದ ಟೆಂಡರ್ ಪ್ರಕ್ರಿಯೆಯನ್ನು ಕೈಗೊಂಡು ದಿನಾಂಕ: 21-01-2020 ರಂತೆ ಮೆ|| ಡಿಡಿಎಫ್ ಕನ್ಸಲ್‌ಟೆಂಟ್ಸ್, ದೆಹಲಿ ಸಂಸ್ಥೆಗೆ ಪ್ಯಾಕೇಜ್-9 ಅಡಿಯಲ್ಲಿ (ಕಲಬುರಗಿ, ರಾಯಚೂರು ಹಾಗೂ ಬೀದರ ಪಟ್ಟಣಗಳಿಗೆ), ಮಹಾಯೋಜನೆ ಕಾರ್ಯವನ್ನು ವಹಿಸಲಾಗಿರುತ್ತದೆ ಹಾಗೂ ಕಾರ್ಯಾದೇಶವನ್ನು ನೀಡಲಾಗಿರುತ್ತದೆ.

ಕ್ಲೋವಿಡ್-19 ಸಾಂಕ್ರಾಮಿಕ ರೋಗದ ನಿಮಿತ್ತ ಮಹಾಯೋಜನೆ ತಯಾರಿಸುವ ಕಾರ್ಯವು ವಿಳಂಬವಾಗಿರುತ್ತದೆ. ಒಪ್ಪಂದದ ಕರಾರು ಪತ್ರದಂತೆ ಡಿಡಿಎಫ್ ಕನ್ಸಲ್‌ಟೆಂಟ್ಸ್ ನವದೆಹಲಿ ಇವರು ಅಗತ್ಯ ಸಿಬ್ಬಂದಿಗಳನ್ನು ಒದಗಿಸಿ ನಿಗಧಿತ ಅವಧಿಯಲ್ಲಿ ಮಹಾಯೋಜನೆ ಕಾರ್ಯವನ್ನು ಪೂರ್ಣಗೊಳಿಸಬೇಕಾಗಿತ್ತು.

ದಿನಾಂಕ: 13-01-2022 ರಲ್ಲಿ ಮೆ|| ಡಿಡಿಎಫ್ ಕನ್ಸಲ್‌ಟೆಂಟ್ಸ್ ಸಂಸ್ಥೆಯವರು ಮಹಾಯೋಜನೆ ಕೆಲಸ ತಯಾರಿಸುವ ಕೆಲಸದಿಂದ ಹಲವು ಕಾರಣಗಳಿಂದ ಹಿಂದೆ ಸರಿಯುತ್ತಿರುವುದಾಗಿ ತಿಳಿಸಿ ಪತ್ರ ಬರೆದಿರುತ್ತಾರೆ.

ದಿನಾಂಕ: 05-07-2022 ರಂದು ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಜರುಗಿಸಿ ಮೆ|| ಡಿ.ಡಿ.ಎಫ್. ಕನ್ಸಲ್‌ಟೆಂಟ್ಸ್ ರವರಿಗೆ ಮಹಾಯೋಜನೆ ಕೆಲಸವನ್ನು ಪುನಃ ಪ್ರಾರಂಭಿಸಲು ಸೂಚಿಸಿದ್ದು, ಸದರಿ ಸಂಸ್ಥೆಯವರು ಮಹಾಯೋಜನೆ ಕೆಲಸವನ್ನು ಪುನಃ ಪ್ರಾರಂಭಿಸುವುದಾಗಿ ಲಿಖಿತವಾಗಿ ಒಪ್ಪಿಗೆ ನೀಡಿರುತ್ತಾರೆ, ಮತ್ತು ಮಹಾಯೋಜನೆಯನ್ನು ತಯಾರಿಸುವ ಸಂಬಂಧ ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸಿ ಆದಷ್ಟು ಬೇಗನೆ ಮಹಾಯೋಜನೆ ತಯಾರಿಸುವುದಾಗಿ ತಿಳಿಸಿರುತ್ತಾರೆ.

ಮೆ|| ಡಿ.ಡಿ.ಎಫ್. ಸಂಸ್ಥೆಯವರು ಮಹಾಯೋಜನೆ ಕೆಲಸವನ್ನು ನವೆಂಬರ್-2022 ರಿಂದ ಪುನಃ ಪ್ರಾರಂಭಿಸಿರುವುದರಿಂದ ಕಲಬುರಗಿ ಮಹಾನಗರದ ಮೂಲ ನಕ್ಷೆ ತಯಾರಿಸುವ ಕೆಲಸ ಅಂತಿಮ ಹಂತದಲ್ಲಿದ್ದು, ಮಾರ್ಚ 2023 ರ ಒಳಗಾಗಿ ಕರಡು ಮಹಾಯೋಜನೆಯನ್ನು ಸಿದ್ದಪಡಿಸಿ ಸಲ್ಲಿಸುವುದಾಗಿ ಪ್ರಾಧಿಕಾರ ರವರು ವರದಿ ಮಾಡಿರುತ್ತಾರೆ. ಪ್ರಾಧಿಕಾರದಿಂದ ಮಹಾಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ನಿಯಮಾನುಸಾರ ಪರಿಶೀಲಿಸಿ ಅನುಮೋದನೆ ನೀಡಲು ಕ್ರಮವಹಿಸಲಾಗುವುದು.

ಸಂಖ್ಯೆ ನಅಇ 58 ಗುಅಪ್ರಾ 2023

(ಬಿ.ಎ.ಬಸವರಾಜ)
ನಗರಾಭಿವೃದ್ಧಿ ಸಚಿವರು.

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು